# ನಾರಣಪ್ಪನ ನಾಲ್ಕು ಅಗ್ಗಳಿಕೆಗಳು

'ಅಗ್ಗಳಿಕೆ' ಎಂಬುದಕ್ಕೆ ಹಿರಿಮೆ, ಹೆಚ್ಚುಗಾರಿಕೆ, ಸಾಮರ್ಥ್ಯ ಮುಂತಾದ ಸಮಾನಾರ್ಥಕ ಪದಗಳಿರುವುದು ಕನ್ನಡ ಬಲ್ಲವರಿಗೆ ಗೊತ್ತಿರುವ ಸಂಗತಿ. ತಮ್ಮಲ್ಲಿನ ಅಗ್ಗಳಿಕೆಯನ್ನು ಇತರರು ಗಮನಿಸಬೇಕೆಂಬುದು ಮನುಷ್ಯರಲ್ಲಿರುವ ಒಂದು ಸಹಜ ಹಂಬಲ. ಎಷ್ಟೋ ಸಂದರ್ಭಗಳಲ್ಲಿ ನಾವೇ ಸ್ವತಃ ನಮ್ಮಲ್ಲಿರುವ ಅಥವಾ ಇಲ್ಲದಿರುವ ಹಿರಿಮೆ ಗರಿಮೆಗಳನ್ನು ಮಾತುಗಳಲ್ಲೋ, ಬರೆವಣಿಗೆಯಲ್ಲೋ ವ್ಯಕ್ತಪಡಿಸುವ ಚಾಪಲ್ಯಕ್ಕೆ ಒಳಗಾಗುತ್ತೇವೆ. ಇಂಥ ಕ್ರಿಯೆ 'ಸ್ವಪ್ರಶಂಸೆ' ಎನ್ನಿಸಿಕೊಂಡು, ಇತರರ ದೃಷ್ಟಿಯಲ್ಲಿ ನಾವು ಹಗುರವಾಗುವ ಅಪಾಯವಿದೆ. ಆದರೆ ತಮ್ಮಲ್ಲಿರುವ ಸಾಮರ್ಥ್ಯವನ್ನೋ, ಗುಣ ವಿಶೇಷಗಳನ್ನೋ ತಮ್ಮ ಕೃತಿಗಳಲ್ಲಿ ಅಕ್ಷರಶಃ ಮೂರ್ತಗೊಳಿಸುವ ಧೀರ ಚೇತನರು ಯಾವ ಹಿಂಜರಿಕೆಯೂ ಇಲ್ಲದೆ– ತಮ್ಮ ಹೆಚ್ಚುಗಾರಿಕೆಗಳನ್ನು ಸ್ಪಷ್ಟ ಮಾತುಗಳಲ್ಲಿ ಹೇಳುತ್ತಾರೆ. ಅದು 'ಸ್ವಪ್ರಶಂಸೆ' ಎನ್ನಿಸುವುದಿಲ್ಲ; ಬದಲಾಗಿ 'ಆತ್ಮಪ್ರತ್ಯಯದ ಅಭಿವ್ಯಕ್ತಿ' ಎನ್ನಿಸಿಕೊಳ್ಳುತ್ತದೆ.

ಕನ್ನಡದ ಪ್ರಾಚೀನ ಕವಿಗಳಲ್ಲಿ ಕೆಲವರು ತಮ್ಮ ಕಾವ್ಯಾರಂಭದಲ್ಲಿಯೇ ತಮ್ಮ ಸಾಮರ್ಥ್ಯ, ಹಿರಿಮೆಗಳನ್ನು ಪ್ರಸ್ತಾಪಿಸಿದ್ದಾರೆ. ಕೆಲಮಂದಿ, ಸಾಮಾನ್ಯ ದರ್ಜೆಯ ಕವಿಗಳು ಈ ಪರಂಪರೆಯನ್ನು ಅನುಸರಿಸಿ, ನಗೆಪಾಟಲಿಗೆ ಈಡಾಗಿರುವ ಸಂದರ್ಭಗಳೂ ಇವೆ. ಪಂಪ, ರನ್ನ, ಕುಮಾರವ್ಯಾಸ (ಗದುಗಿನ ನಾರಣಪ್ಪ) ನಂಥವರು ಕಾವ್ಯಾರಂಭದಲ್ಲಿ ತಾವು ಪ್ರಸ್ತಾಪಿಸಿದ್ದ ಅಗ್ಗಳಿಕೆಗಳನ್ನು ತಮ್ಮ ಕೃತಿಗಳಲ್ಲಿ ಸಾಬೀತುಗೊಳಿಸಿದ್ದಾರೆ, ಗದುಗಿನ ನಾರಣಪ್ಪ 'ಕರ್ಣಾಟ ಭಾರತ ಕಥಾ ಮಂಜರಿ'ಯ ಪೀಠಿಕಾ ಸಂಧಿಯಲ್ಲಿ ತನ್ನ ಅಗ್ಗಳಿಕೆಗಳನ್ನು ಇಡೀ ಒಂದು ಷಟ್ಪದಿಯಲ್ಲಿ ಸ್ಪಷ್ಟ ಮಾತುಗಳಲ್ಲಿ ಪಟ್ಟಿ ಮಾಡಿರುವುದನ್ನು ಗಮನಿಸಬಹುದು. ಮಾತುಗಳ ಬಳಕೆ, ಛಂದಸ್ಸಿನ ಕುಣಿತ, ಲಯಗಾರಿಕೆ, ಎಲ್ಲಕ್ಕೂ ಮಿಗಿಲಾಗಿ ರೂಪಕ ಶಕ್ತಿ– ಇಂಥ ಎಲ್ಲ ನೆಲೆಗಳಿಂದಲೂ ಕುಮಾರವ್ಯಾಸನಿಗೆ ತನ್ನ ಅಗ್ಗಳಿಕೆಗಳನ್ನು ಹೇಳಿಕೊಳ್ಳುವ ಅರ್ಹತೆ ಖಂಡಿತ ಇದೆ ಎಂದು ಹೇಳಬಹುದು.

'ವೀರ ನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ' ಎಂದು ತನಗೆ ಸಹಜವಾದ ಭಕ್ತ ವಿನಯದಿಂದ ಹೇಳಿಕೊಂಡಿರುವ ನಾರಣಪ್ಪ ತನ್ನ ಕಾವ್ಯ ಪ್ರತಿಭೆಗೆ ಕುರುಡಾಗಿಲ್ಲ. ತನ್ನದು 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ' ಎನ್ನುತ್ತಾನೆ ಆತ. ಬಳಪದಿಂದ ಹಲಗೆಯ ಮೇಲೆ ಪದ್ಯ ಬರೆದು, ಬರೆದುದನ್ನು ಓದಿ, ಅಗತ್ಯ ವೆನ್ನಿಸಿದೆಡೆಗಳಲ್ಲಿ ಮಾರ್ಪಡಿಸಿ, ಹಾಗೆ ಸಿದ್ಧವಾದ ಕರಡು ಪ್ರತಿಯಿಂದ ಶುದ್ಧ ಪ್ರತಿಯನ್ನು ತಯಾರಿಸುವ ಶ್ರಮ ಅವನದಲ್ಲ. ಮೊದಲಬಾರಿ ಬರೆದುದೇ ಅಂತಿಮ ಪ್ರತಿ. ಹೀಗೆ ಶುದ್ಧ–ಸಿದ್ಧ ರೂಪದಲ್ಲಿ ಪ್ರಕಟವಾಗುವ ಅಭಿವ್ಯಕ್ತಿ ಶಕ್ತಿ ಆತನದು. ಇದು ಆತನ ಸಾಮರ್ಥ್ಯಗಳಲ್ಲಿ ಮೊದಲನೆಯದು. 'ಪದವಿಟ್ಟಳುಪದೊಂದಗ್ಗಳಿಕೆ' ತನ್ನದು ಎನ್ನುವ ಕುಮಾರವ್ಯಾಸ ತನ್ನಲ್ಲಿರುವ ಇನ್ನೊಂದು ವಿಶೇಷ ಶಕ್ತಿಯನ್ನು ಸೂಚಿಸುತ್ತಾನೆ. ತಾವು ಉಪಯೋಗಿಸಿದ ಪದಗಳನ್ನೋ, ಬರೆದ ಪಂಕ್ತಿಗಳನ್ನೋ ಮತ್ತೆ ಮತ್ತೆ ಬದಲಾಯಿಸುವ 'ಪರಿಷ್ಕಾರ ಪ್ರಿಯರು' ಎಲ್ಲ ಕಾಲಕ್ಕೂ ಇದ್ದಾರೆ. ಆದರೆ ನಮ್ಮ ಕುಮಾರವ್ಯಾಸ ಈ ಗುಂಪಿಗೆ ಸೇರಿದವನಲ್ಲ. ಭಾವನೆಗೆ, ಕಲ್ಪನೆಗೆ ಒದಗಿ ಬರುವ ಪದಗಳನ್ನು ಅಳಿಸಿ, ಹೊಸ ಪದಗಳನ್ನು ಬಳಸುವ ಅಗತ್ಯವೇ ಆತನಿಗಿಲ್ಲ. ಹೀಗಾಗಿ ಆತನ ರಚನೆ ಪರಿಷ್ಕಾರ ಪ್ರಕ್ರಿಯೆಗೆ ಒಳಗಾಗದೇ ಪರಿಪೂರ್ಣ ರೂಪದಲ್ಲಿಯೇ ಕಾಣಿಸಿಕೊಳ್ಳಲು ಸಾಧ್ಯವಾಗುತ್ತದೆ. ಒಂದು ಅರ್ಥದಲ್ಲಿ ನಾರಣಪ್ಪ ಆಶುಕವಿಗಳ ಗುಂಪಿಗೆ ಸೇರಿದವನೆಂದರೆ ತಪ್ಪಲ್ಲ. 'ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ' ಎಂಬುದಂತೂ ಶ್ರೇಷ್ಠ ಕವಿಗಳ ಮುಖ್ಯ ಲಕ್ಷಣಗಳಲ್ಲಿ ಒಂದು, 'ಬೇರೊಬ್ಬರ ಕಾವ್ಯ ರಚನಾ ವಿನ್ಯಾಸವನ್ನು ಅನುಸರಿಸದ, ಅನುಕರಿಸದ ಹಿರಿಮೆ ನನ್ನದು' ಎನ್ನುತ್ತಾನೆ ಕುಮಾರವ್ಯಾಸ. ಹಿರಿಯ ಕವಿಗಳ ಪ್ರಭಾವಕ್ಕೆ ಒಳಗಾಗದೇ ಸ್ವಂತಿಕೆಯನ್ನೂ, ಅನನ್ಯತೆಯನ್ನೂ ಕಾಪಾಡಿಕೊಳ್ಳುವ ಕವಿಗಳು ವಿರಳ. ಅಂಥ ವಿರಳದಲ್ಲಿ ಕುಮಾರವ್ಯಾಸನೂ ಒಬ್ಬ. ಆತನ ಭಾರತ 'ವ್ಯಾಸ ಭಾರತದ ಪ್ರತಿಕೃತಿಯಲ್ಲ ಹಾಗೂ ಪಂಪ ಭಾರತದ ಪ್ರತಿಚ್ಛಾಯೆಯೂ ಅಲ್ಲ' ಎನ್ನುತ್ತಾರೆ ವಿಮರ್ಶಕರು, 'ಕಂಠಪತ್ರಗಳ ಉಲುಹು ಗೆಡೆದಂತೆ' ಬರೆಯುವ ಅಗ್ಗಳಿಕೆ ನಾಲ್ಕನೆಯದು. ತಾಳೆಯೋಲೆಯ ಮೇಲೆ ಕಬ್ಬಿಣದ ಕಡ್ಡಿಯಿಂದ ಬರೆಯುವಾಗ ಉಂಟಾಗುವ ಸದ್ದು ನಡು ನಡುವೆ ನಿಲ್ಲದಂತೆ, ಅವಿಚ್ಛಿನ್ನವಾಗಿ ಬರೆಯುವ ಸಾಮರ್ಥ್ಯ ಆತನದಂತೆ. ಕಾವ್ಯ ರಚನೆಯೆಂಬುದು ಆತನ ಪಾಲಿಗೆ ತಲೆ ಕೆರೆಯುತ್ತಾ, ಉಗುರು ಕಡಿಯುತ್ತಾ ಬರೆಯುತ್ತಾ, ನಿಲ್ಲಿಸುತ್ತಾ ಮುಂದುವರೆಯುವ ಸಾವಧಾನದ ಕ್ರಿಯೆಯಲ್ಲ, ಆತನ ಕಾವ್ಯ ಪ್ರತಿಭೆ ತೈಲಧಾರೆಯಂತೆ, ದುಮ್ಮಿಕ್ಕುವ ಜಲಪಾತದಂತೆ ಸಂದು ಗಡಿಯದೇ ವಾಗ್ರೂಪದಲ್ಲಿ ಪ್ರವಹಿಸುವಂಥದು. ಅಲ್ಲಿ ಯಾವುದೇ ತಿಣುಕಾಟದ ಅಗತ್ಯವಿಲ್ಲ, ಕುಮಾರವ್ಯಾಸ ಪಟ್ಟಿ ಮಾಡಿರುವ ಅಗ್ಗಳಿಕೆಗಳು ಎಲ್ಲ ಸಹಜ, ಶ್ರೇಷ್ಠ, ಧೀಮಂತ ಕವಿಗಳ ಸಾಮರ್ಥ್ಯಗಳನ್ನು ನಿರ್ದೇಶಿಸುತ್ತವೆ ಎನ್ನಬಹುದು.

■ ವೈನತೇಯ

---

# ಮಾತೇ ಮುತ್ತು

★ ಹೆಣ್ಣು ಮಾಯೆಯೆಂಬರು– ಹೆಣ್ಣು ಮಾಯೆಯಲ್ಲ. ಹೊನ್ನು ಮಾಯೆಯೆಂಬರು– ಹೊನ್ನು ಮಾಯೆಯಲ್ಲ. ಮಣ್ಣು ಮಾಯೆಯೆಂಬರು– ಮಣ್ಣು ಮಾಯೆಯಲ್ಲ. ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ.

–ಅಲ್ಲಮಪ್ರಭು

★ ಮೊಲೆ ಮೂಡಿಬಂದರೆ ಹೆಣ್ಣೆಂಬರು. ಮೀಸೆ ಕಾಸೆ ಬಂದರೆ ಗಂಡೆಂಬರು. ನಡುವೆ ಇರುವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ.

–ಜೇಡರ ದಾಸೀಮಯ್ಯ

★ ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಇಡೀ ವಿಶ್ವಸಾಹಿತ್ಯದಲ್ಲೇ ಮೊಟ್ಟ ಮೊದಲಿಗೆ ಬಲವಾಗಿ ಪ್ರತಿಪಾದಿಸಿ ಕಾವ್ಯ ರಚಿಸಿದವರು 12ನೇ ಶತಮಾನದ ವಚನಕಾರರು.

–ಜಯದೇವಿ ತಾಯಿ ಲಿಗಾಡೆ

★ ಹೆಣ್ಣುಮಗಳನ್ನು ಪಡೆಯದ ತಂದೆಯು ಜೀವನದಲ್ಲಿ ಪ್ರೀತಿಯನ್ನು ಕಾಣುವುದೇ ಇಲ್ಲ.

–ಸಂಚಿ ಹೊನ್ನಮ್ಮ

★ ಮಹಿಳೆಗೆ ಮಾತ್ರವಲ್ಲ; ಎಲ್ಲ ಜನರಿಗೂ, ಎಲ್ಲ ಗುಣಗಳಿಗೂ ಶೀಲವೇ ಶ್ರೇಷ್ಠವಾದ ಭೂಷಣ.

–ಭರ್ತೃಹರಿ

★ ಒಳ್ಳೆಯ ಗೃಹಿಣಿ ಭೂಮಿಯ ಮೇಲೆ ಸಂಸಾರ ಮಾಡಲು ಇಳಿದು ಬಂದ ಸ್ವರ್ಗದ ದೇವತೆ.

–ಮಿರ್ಜಿ ಅಣ್ಣಾರಾಯ

★ ಬರಿಯ ಮನೆಯನ್ನು ಮನೆ ಎನ್ನುವುದಿಲ್ಲ. ಗೃಹಿಣಿಯೇ ಗೃಹ ಎನಿಸಿಕೊಳ್ಳುತ್ತಾಳೆ. ಗೃಹಿಣಿ ಇಲ್ಲದ ಮನೆ– ಅರಣ್ಯ ಸದೃಶ.

–ಪಂಚತಂತ್ರ

★ ಗೃಹಿಣಿ ನೀನೆ ಗೃಹದ ದೇವಿ; ನೀನು ದೂರ ಹೋದರೆ ಮಸಣದೊಂದು ಹಾಳು ಬಾವಿ. ಗೃಹವಿದು– ಮನೆ ಎಂಬರೇ?

–ಕುವೆಂಪು

★ ಗೃಹಿಣಿಯೇ ಗೃಹವೆನ್ನುವರು– ಗೋಡೆಗಳು, ಛಾವಣಿಗಳಿಂದ ಕೂಡಿದ ಕಟ್ಟಡವನ್ನಲ್ಲ.

–ಸೋಮದೇವ

★ ಇವನೇ ತಿರುಗಿ ನನ್ನ ಗಂಡನಾಗಬೇಕು. ಇವಳೇ ಮುಂದಿನ ಜನ್ಮದಲ್ಲಿ ನನ್ನ ಹೆಂಡತಿ ಆಗಬೇಕು ಎಂಬ ಅಪೇಕ್ಷೆ ಎಷ್ಟು ಜನರಲ್ಲಿ ಬಂದೀತು? ಸಂಸಾರದ ನೋವನ್ನು ತಿನ್ನುತ್ತಿರುವವರಿಗೆ ಅಂಥ ಆಸೆ ಉಳಿಯುವುದು ಸಾಧ್ಯವೇನು?

–ಶಿವರಾಮ ಕಾರಂತ

★ ಹೆಂಗಸಿಗೆ ಗಂಡನ ಹೃದಯದಲ್ಲಿ ಎಂದು ಸ್ಥಿರವಾದ ಸ್ಥಳ ಸಿಕ್ಕುವುದೋ ಅಂದೇ ಅವಳು ಗೃಹಿಣಿಯಾಗುವುದು.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಗಂಡನನ್ನು ಯಜಮಾನನಂತೆ ಸೇವಿಸು; ದ್ರೋಹಿಯೇನೋ ಎಂಬಂತೆ ಅವನ ಬಗ್ಗೆ ಎಚ್ಚರದಿಂದಿರು!

–ಮಾಂಟೆಯ್ನ್

★ ಆದರ್ಶ ಹೆಂಡತಿ– ಯಾವ ಹೆಂಗಸಾದರೂ ಆಗಬಹುದು– ಆದರ್ಶ ಗಂಡ ಇದ್ದರೆ.

–ಬೂತ್ ಟಾರ್ಕಿಂಗ್ ಟನ್